**PW-1**: ಮಹಮ್ಮದ್ ಫಿರೋಜ್

ದಿನಾಂಕಃ **16.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ ಎಸ್.ಎ.ಆರ್. ವಕೀಲರಿಂದಃ**

ನಾನು ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನನ್ನ ಪರವಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲಾತಿಗಳನ್ನು ನಿಶಾನೆಗೊಳಿಸಬೇಕಾಗಿ ವಿನಂತಿ.

ಸಾಕ್ಷಿಯು ಸಾಲದ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 1 ಎಂದು, ಕರಾರು ನಿಬಂಧನೆಗಳನ್ನು ನಿಪಿ. 2 ಎಂದು, ಅಡಮಾನ ಕರಾರು ಅನ್ನು ನಿಪಿ. 3 ಎಂದು, ಅಡಮಾನಪತ್ರವನ್ನು ನಿಪಿ. 4 ಎಂದು, ಪಹಣಿ ಪತ್ರಿಕೆಗಳನ್ನು ನಿಪಿ. 5 ರಿಂದ 7 ಎಂದು, ವಂಶವೃಕ್ಷವನ್ನು ನಿಪಿ.8 ಎಂದು, acknowledgement of liability ಅನ್ನು ನಿಪಿ.9 ಎಂದು, revival letter ಅನ್ನು ನಿಪಿ. 10 ಮತ್ತು 11 ಎಂದು, ತಿಳುವಳಿಕೆ ಪತ್ರವನ್ನು ನಿಪಿ. 12 ಎಂದು, ಅಂಚೆ ರಶೀದಿಯನ್ನು ನಿಪಿ. 13 ಎಂದು, ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ.14 ರಿಂದ 16 ಎಂದು, ವಾಪಸ್ಸಾದ ಅಂಚೆ ಲಕೋಟೆಯನ್ನು ನಿಪಿ.17 ಎಂದು, ಲಕೋಟೆಯಲ್ಲಿರುವ ತಿಳುವಳಿಕೆ ಪತ್ರವನ್ನು ನಿಪಿ.17(ಎ) ಎಂದು, ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ನಿಪಿ. 18 ರಿಂದ 20 ಎಂದು, ಗುರುತಿಸಲಾಯಿತು.

(ಪ್ರತಿವಾದಿಗಳ ವಿರುದ್ಧ ಏಕಪಕ್ಷೀತರ ಆದೇಶ ಆಗಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.